2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮಾಗಡಿ

**ಸಿಸಿ ಸಂಖ್ಯೆ: 5889/2025**

**ಪಿರ್ಯಾದಿ** : ನರಸಿಂಹಮೂರ್ತಿ

**ವಿರುದ್ಧ**

**ಆರೋಪಿ** : ನಾಗರತ್ನಮ್ಮ

**ದಂಡ ಪ್ರಕ್ರಿಯಾ ಸಂಹಿತೆ 313 ರನ್ವಯ ಆರೋಪಿತರ ಹೇಳಿಕೆ**

**ಪ್ರಶ್ನೆ :1:** ಈ ಪ್ರಕರಣದಲ್ಲಿ ಪಿರ್ಯಾದುದಾರರ ಪರ ವಿಚಾರಣೆ ಮಾಡಿರುವ ಸಾಕ್ಷಿಗಳ ಹೇಳಿಕೆಯನ್ನು ಕೇಳಿ ಅರ್ಥ ಮಾಡಿಕೊಂಡಿದ್ದೀರಾ **?**

**ಉತ್ತರಃ**

**ಪ್ರಶ್ನೆ :2:** ಪ್ರಾಸಾಃ**1/**ಪಿರ್ಯಾದುದಾರರು ರವರು ತಮ್ಮ ಹೇಳಿಕೆಯಲ್ಲಿ ಮುಖ್ಯ ವಿಚಾರಣೆಯಲ್ಲಿ ಆರೋಪಿಯಾದ ನೀವು ಪಿರ್ಯಾದುದದಾರರಿಂದ ರೂ**:5,00,000/-** ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು**,** ಇದರ ಮರುಪಾವತಿಗಾಗಿ ರೂ**.5,00,000/-**ರೂ ಗಳಿಗೆ **Canara Bank, Tavarekere Branch** ನಿಮ್ಮ ಖಾತೆಗೆ ಸಂಬಂಧಪಟ್ಟ ಚೆಕ್ ಸಂ**:770360** ರ ದಿನಾಂಕಃ **05.08.2025** ನಮೂದು ಮಾಡಿ ಪಿರ್ಯಾದುದಾರರಿಗೆ ನೀವು ನೀಡಿ ಹಣವನ್ನು ನಗದೀಕರಣಗೊಳಿಸಿಕೊಳ್ಳುವಂತೆ ಸೂಚಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ**.** ಇದಕ್ಕೆ ನೀವೇನು ಹೇಳುತ್ತೀರಿ**?**

**ಉತ್ತರ:**

**ಪ್ರಶ್ನೆ :3:** ಪ್ರಾಸಾಃ**1** ರವರು ಮುಂದುವರೆದು**,** ಪಿರ್ಯಾದುದಾರರು ತಾನು ಖಾತೆ ಹೊಂದಿದ್ದ **Canara Bank, Tavarekere** ಶಾಖೆಯಲ್ಲಿರುವ ಖಾತೆಗೆ ಚೆಕ್ಕನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನಿಮ್ಮ ಖಾತೆಯು **"Funds Insufficient"** ಎಂಬ ಕಾರಣಕ್ಕಾಗಿ ದಿನಾಂಕ**: 26.08.2025** ರಂದು ಅಮಾನ್ಯಗೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ**.** ಇದಕ್ಕೆ ನೀವೇನು ಹೇಳುತ್ತೀರಿ **?**

**ಉತ್ತರ:**

**ಪ್ರಶ್ನೆ :4:** ಪ್ರಾಸಾಃ**1** ರವರು ಮುಂದುವರೆದು**,** ದಿಃ **29.08.2025** ರಂದು ಅಂಚೆ ಸ್ವೀಕೃತಿಯ ನೋಟಿಸ್ ನ್ನು ತನ್ನ ವಕೀಲರ ಮೂಲಕ ಕಳುಹಿಸಿ ಚೆಕ್ ಹಣವನ್ನು ಮರುಪಾವತಿ ಮಾಡುವಂತೆ

ವಿನಂತಿಸಿಕೊಂಡರೂ ಸಹ**,** ಆರೋಪಿಯಾದ ನೀವು ಯಾವುದೇ ಕ್ರಮ ಕೈಗೊಳ್ಳದೆ ಫಿರ್ಯಾದುದಾರರನ್ನು ವೋಸಗೊಳಿಸಲು ಉದ್ದೇಶಪೂರ್ವಕವಾಗಿ ಸದರಿ ಚೆಕ್ ಅನ್ನು ಕೊಟ್ಟಿರುತ್ತೀರೆಂದು ಸಾಕ್ಷ್ಯ ನುಡಿದಿರುತ್ತಾರೆ**.** ಇದಕ್ಕೆ ನೀವೇನು ಹೇಳುತ್ತೀರಿ**?**

**ಉತ್ತರ:**

**ಪ್ರಶ್ನೆ :5:** ನೀವು ಈ ಪ್ರಕರಣದ ಬಗ್ಗೆ ಇನ್ನೇನಾದರೂ ಹೆಚ್ಚಿನ ವಿಷಯಗಳನ್ನು ಹೇಳಲು ಬಯಸುವಿರಾ**?**

**ಉತ್ತರ:**

**ಪ್ರಶ್ನೆ:6:** ನೀವು ನಿಮ್ಮ ಪರವಾದ ಯಾವುದಾದರೂ ಸಾಕ್ಷ್ಯವನ್ನು ಮತ್ತು ದಾಖಲೆಗಳನ್ನು ಹಾಜರುಪಡಿಸುತ್ತೀರಾ **?**

**ಉತ್ತರ:**

**ನನ್ನ ಸಮಕ್ಷಮದಲ್ಲಿ ಆರೋಪಿತರ ವಿಚಾರಣೆಯನ್ನು ನಡೆಸಿದ್ದು, ಆರೋಪಿತರು ನೀಡಿದ ಉತ್ತರವನ್ನು ಯಥವತ್ತಾಗಿ ಮತ್ತು ಸಂಪೂರ್ಣವಾಗಿ ದಾಖಲು ಮಾಡಿಕೊಂಡಿದ್ದೇನೆಂದು ಈ ಮೂಲಕ ದೃಢಪಡಿಸುತ್ತೇನೆ.**

**ದಿನಾಂಕಃ 03.06.2026 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿತರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.**

**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಮಾಗಡಿ**